ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
ಕೃಷಿ ಹವಾಮಾನ ವಿಭಾಗ
ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65
ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 02.08.2013

ಈ ವಾರದ ಮುನ್ಸೂಚನೆ (ದಿನಾಂಕ 03.08.13– 07.08.13 ವರೆಗೆ)

ನಿಯತಾಂಕಗಳು	03.08.13	04.08.13	05.08.13	06.08.13	07.08.13
ಮಳೆ (ಮಿ.ಮೀ)	2	3	2	3	2
ಗರಿಷ್ಠ ಉಷ್ಣಾಂಶ(ಡಿ.ಸೆ.)	28	27	28	28	27
ಕನಿಷ್ಠ ಉಷ್ಣಾಂಶ (ಡಿ.ಸೆ.)	19	19	19	20	20
ಮೋಡ (ಪ್ರಮಾಣ)	5	5	6	6	7
ಅರ್ದ್ರತೆ ೭.೨೦ ಬೆ (ಶೇ)	84	85	86	86	84
ಅರ್ದ್ರತೆ ೨.೨೦ ಮ (ಶೇ)	65	67	65	66	68
ಗಾಳಿಯ ವೇಗ (ಕಿ.ಮೀ/ಗಂಟೆಗೆ)	6	7	7	6	8
ಗಾಳಿಯ ದಿಕ್ಕು (ಡಿಗ್ರಿ)	270	280	270	280	280

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎಲ್ಲಾ ಐದು ದಿನಗಳಲ್ಲೂ ಭಾಗಶಃ ಮೋಡ ಕವಿದ ವಾತಾವರಣವಿದ್ದು, ಹಗುರದಿಂದ ಸಾಧಾರಣವಾಗಿ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ 27.0-28.0^{o}C ಮತ್ತು ಕನಿಷ್ಠ 19-20^{o}C ಇರಲಿದೆ. ಬೆಳಿಗಿನ ಅರ್ದ್ರತೆ ಪ್ರಮಾಣ ಶೇ 84-86 % ಇದ್ದು ಮಧ್ಯಾಹ್ನ 65-68 % ಇರುವುದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 6-8 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಉಳುಮೆ ಹಾಗೂ ಬಿತ್ತನೆ ಮಾಡುವಾಗ ಇಳಿಜಾರಿಗೆ ಅಡ್ಡಲಾಗಿ ಸಾಲು ಹೊಡೆದು ಬಿತ್ತನೆ ಮಾಡುವುದರಿಂದ ಮಳೆ ನೀರು ಭೂಮಿಯಲ್ಲಿ ಚೆನ್ನಾಗಿ ಇಂಗುತ್ತದೆ.
- ಜಾನುವಾರುಗಳಿಗೆ ಕಾಲು ಬಾಯಿ ಜ್ವರದಿಂದ ತಪ್ಪಿಸಲು ಸರಿಯಾದ ಲಸಿಕೆ ಹಾಕಿಸುವುದು ಒಳ್ಳೆಯದು.
- ರಾಗಿ, ತೊಗರಿ ಮುಂತಾದ ಬೆಳೆಗಳಲ್ಲಿ ಅಂತರ ಬೇಸಾಯ ಮಾಡಿ ಕಳೆಯನ್ನು ತೆಗೆಯಲು ಸೂಚಿಸಲಾಗಿದೆ
- ಮಳೆ ಜೋರಾಗಿ ಬಿದ್ದಿರುವ ಕಡೆ ಬಸಿಗಾಲುವೆಗಳನ್ನು ಮಾಡಿ ನೀರು ನಿಲ್ಲದಂತೆ ನೋಡಿಕೊಳ್ಳಿ
- ಗಾಳಿಯು ವೇಗದಿಂದ ಬೀಸುತ್ತಿರುವುದರಿಂದ, ತರಕಾರಿ ಬೆಳೆಗಳಿಗೆ ಸೂಕ್ತ ಆಸರೆ ಒದಗಿಸುವುದು ಅತ್ಯವಶ್ಯಕ
- ಮುಖ್ಯ ಬೆಳೆಗಳ ಸುತ್ತಲೂ ನೆಟ್ ಹಾಕುವುದರಿಂದ ಅನೇಕ ಕೀಟಗಳನ್ನು ತಡೆಯಬಹುದು

ಪಾಪ್ ಕಾರ್ನ್: ಕಾಂಡ ಕೊರೆಯುವ ಹುಳು ಕಂಡುಬಂದರೆ:

ಕ್ಲೋರೊಪೈರಿಫ಼ಾಸ್ ಅನ್ನು ೧.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.

ಗುಲಾಬಿ: ಥ್ರಿಪ್ಸ್:

- ಥ್ರಿಪ್ಸ್ ನುಸಿಯ ಬಾಧೆಯನ್ನು ತಡೆಯಲು ಬೆಳೆಯ ಸುತ್ತ ಇರುವ ಕಳೆಗಳನ್ನು ನಾಶ ಪಡಿಸಬೇಕು ಹಾಗೂ ಹೊಲವನ್ನು ಶುಚಿಯಾಗಿಡಬೇಕು
- ಹೊಲದ ಸುತ್ತ ನೆಟ್ ಹಾಕಬೇಕು ಅಥವಾ ಎತ್ತರ ಬೆಳೆಯುವ ಬೆಳೆಗಳಾದ ಮೆಕ್ಕೆ ಜೋಳ/ ಜೋಳ ಇತ್ಯಾದಿ ಬೆಳೆಗಳನ್ನು ಬೆಳೆಸಿ ಮುಖ್ಯ ಬೆಳೆಗಳನ್ನು ರಸ ಹೀರುವ ಕೀಟಗಳಿಂದ ರಕ್ಷಿಸಬಹುದು.
- ಅಜಾಡಿರಕ್ಟಿನ್/ಬೇವಿನ ಎಣ್ಣೆ/ಇವುಗಳಲ್ಲಿ ಯಾವುದಾದರು ಒಂದನ್ನು ಸಿಂಪಡಿಸಿ.

ಕಪ್ಪು ಚುಕ್ಕೆ ರೋಗದ ನಿರ್ವಹಣೆ:

- ✓ ಯೂರಿಯಾವನ್ನು ಅಗತ್ಯಕ್ಕಿಂತ ಹೆಚ್ಚು ಹಾಕಬೇಡಿ.
- ✓ ಮೇಲಿಂದ ಮೇಲೆ ನೀರು ಕೊಡುವುದನ್ನು ಕಡಿಮೆ ಮಾಡಿ.
- ✓ ರೋಗದಿಂದ ಪೀಡಿತವಾಗಿರುವ ಎಲೆಗಳನ್ನು ಆಯ್ದುಕೊಂಡು ನಾಶಪಡಿಸಬೇಕು.
- ✓ ರೋಗ ತೀವ್ರವಾಗಿದ್ದಲ್ಲಿ ಶಿಲೀಂಧ್ರನಾಶಕಗಳಾದ ಮ್ಯಾಂಕೊಜೆಬ್ ಅಥವಾ ಕ್ಲೋರೊತ್ಯಾಲೊನಿಲ್ ಅನ್ನು ಸಿಂಪಡಿಸಬೇಕು.
- ✓ ಥ್ರಿಪ್ಸ್ ಜಾಸ್ತಿಯಿದ್ದಲ್ಲಿ, ಫ಼ಿಪ್ರೋನಿಲ್ ಅನ್ನು ಸಿಂಪಡಿಸಬೇಕು

ಹೂ ಕೋಸು ಹಾಗೂ ಎಲೆ ಕೋಸುವಿನಲ್ಲಿ ಎಲೆ ತಿನ್ನುವ ಹುಳು (ಡೈಮಂಡ್ ಬ್ಯಾಕ್ ಮಾತ್): ಎಲೆಗಳನ್ನು ಸಂಪೂರ್ಣವಾಗಿ ತಿಂದು ಹಾಕುತ್ತವೆ.
ಎಲೆ ಕೋಸು ಅಥವಾ ಹೂಕೋಸು ಜೊತೆ ಟೊಮ್ಯಾಟೊ/ ಸಾಸಿವೆ ಗಿಡಗಳನ್ನು ಅಂತರ ಬೆಳೆಯಾಗಿ ಬೆಳೆದರೆ ಈ ಹುಳುಗಳ ಸಂಖ್ಯೆಯನ್ನು ನಿಯಂತ್ರಿಸಬಹುದು,
ಜೊತೆಗೆ, ಬೇವಿನ ಕಷಾಯ ಅಥವಾ ಬೇವಿನ ಎಣ್ಣೆಯ ಸಿಂಪಡಣೆಯಿಂದ ಸಹ ಹತೋಟಿ ಮಾಡಬಹುದು
ಇವುಗಳನ್ನು ಹತೋಟಿ ಮಾಡಲು ಕ್ವಿನಾಲ್ಫಾಸ್ ಅಥವಾ ಕ್ಲೋರೊಪೈರಿಫ಼ಾಸ್ ಅನ್ನು ೨.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.
ಬೂಜು ರೋಗ (ಡೌನಿ) ಕಂಡುಬಂದಲ್ಲಿ ರಿಡೋಮಿಲ್ (೨ ಗ್ರಾಂ ಪ್ರತಿ ಲೀಟರ್ ನೀರಿಗೆ) ಸಿಂಪಡಿಸಿ.

ನೋಡಲ್ ಅಧಿಕಾರಿ
ಡಾ||ಎಮ್.ಬಿ. ರಾಜೇಗೌಡ
ಬೆಂಗಳೂರು

This PDF was created using a free PDF creator
To remove this message purchase the product at www.SmartPDFCreator.com